ಶ್ರೀ ಎಂ. ಸಿದ್ದಮಾದಯ್ಯ.—ತಮ್ಮ ಅಧಿಕಾರಿಗಳು ತಮಗೆ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ವಂಲ್ಲಹಳ್ಳಿ ಮತ್ತು ಕೆಸ್ತೂರು ರಸ್ತೆಗಳಲ್ಲಿ ತಿರುಗಾಡುವುದಕ್ಕೆ ಆಗುವುದಿಲ್ಲ. ಆ ಭಾಗದ ಜನತೆ ಕಣ್ಣೀರು ಹಾಕುತ್ತಿದ್ದಾರೆ. ಈ ಸಾರಿ ಬಡ್ಜೆಟ್‌ನಲ್ಲಿಯೇ ಇದನ್ನು ಮಂಜೂರು ಮಾಡಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಎರಡು ರಸ್ತೆಗಳ ವಿಚಾರ ಹೇಳಿದ್ದೇನೆ. ಇನ್ನೊಂದು ಸಾರಿ ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ ಸಿದ್ದಮಾದಯ್ಯ.—ಸ್ವಾಮಿ, ಇದು ಸಾವಿರಾರು ಕಿಲೋಮಿಟರುಗಳ ಉದ್ದ ಇಲ್ಲ. ಕೇವಲ ೧೫–೨೦ ಕಿಲೋಮಿಟರ್ ಇದೆ ಎಂದು ಕಾಣುತ್ತೆ. ದಯವಿಟ್ಟು ಇದನ್ನು ಸೇರಿಸಿಕೊಳ್ಳುವುದಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಪರ್ಯಾಯವಾಗಿ ಸೇರಿಸಿಕೊಳ್ಳುವುದಕ್ಕೆ ಬಂದರೆ ಸೇರಿಸಿ ಕೊಳ್ಳೋಣ.

ಶ್ರೀ ಎಂ. ಸಿದ್ದಮಾದಯ್ಯ.—ಕಾಗಲವಾಡಿ ಮತ್ತು ಯಳಂದೂರಂ ರಸ್ತೆಯಲ್ಲಿ ದಿನಕ್ಕೆ ೪೦–೫೦ ವಾಹನಗಳು ತಿರುಗಾಡುತ್ತವೆ. ಅದನ್ನು ಮೂರು ವರ್ಷಗಳಿಂದ ಹೋರಾಟ ಮಾಡಿ, ಮಾಡಿಸಿದ್ದೇನೆ. ಅದನ್ನು ಬದಲಾಯಿಸುವುದಕ್ಕೆ ಹೋಗಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದೆರಡು ರಸ್ತೆಗಳನ್ನು ಮಾಡುವುದಕ್ಕೆ ಅನುಕೂಲ ಮಾಡೋಣ. ಚೌಕಾಸಿ ಏನೂ ಮಾಡಬೇಡಿ.

Construction of Buildings for Dispensaries taken over by Government

1053. SRI S. F. BHAIRI (Shahabad) and SRI PAMPAPATHI (Davanagere).—Will the Minister for Health and Family Welfare be pleased to state.—

(a) whether all the TDB dispensaries in Chittapur taluk have been taken over by Government ;

(b) if so, whether there are any proposals before the Government to construct buildings for the dispensaries not having their own buildings particularly at Natwar ;

(c) if not whether the Government will provide necessary amount in the budget for 1982–83 at least ?

SRI A. K. ABDUL SAMAD (Minister for Health and Family Welfare).—

(a) Yes,

(b) Proposals to construct buildings in a phased manner are under active consideration.

(c) A start in direction will be made this year.

ಶ್ರೀ ಎಸ್. ಎಫ್. ಭೈರಿ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ೧೯೮೨–೮೩ನೇ ಬಡ್ಜೆಟ್‌ನಲ್ಲಿ ಸೇರಿಸಿ ಕಟ್ಟಡವನ್ನು ಕಟ್ಟಲು ಪ್ರಾರಂಭ ಮಾಡಲಾಗುವುದು ಎಂದು ಹೇಳಿದ್ದಾರೆ. ಆದರೆ ಅದನ್ನು ಖಚಿತವಾಗಿ ಹೇಳಿಲ್ಲ, ದಯವಿಟ್ಟು ೧೯೮೨–೮೩ನೇ ಸಾಲಿನ ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿ ಕೊಡುವುದಾಗಿ ತಿಳಿಸುತ್ತಾರೆಯೇ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ತಾಲೂಕ್‌ಬೋರ್ಡ್ ತೆಗೆದುಕೊಂಡಿರತಕ್ಕಂಥ ಆಸ್ಪತ್ರೆಗಳ ಏನು ಇವೆ ಅವುಗಳ ಖರ್ಚು ವೆಚ್ಚಗಳನ್ನು ಐದು ವರ್ಷಗಳಿಂದ ತಾಲೂಕ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳೇ ಹಣವನ್ನು ಖರ್ಚುಮಾಡುತ್ತಿದ್ದಾರೆ. ವಾಸ್ತೆ ಅವುಗಳನ್ನು ನವೀಗೆ ಕೊಡಬೇಕೆಂದು, ಅದರಲ್ಲಿ ನಾವು ೨೫ ಪರ್ಸೆಂಟ್, ಆಸ್ಪತ್ರೆಗಳಿಗೆ ಎಕ್ಸ್‌ಪೆರಿಮೆಂಟಾಗಿ ಈ ವರ್ಷ ಕೊಡಬೇಕೆಂದು ಯೋಚಿಸಿದ್ದೇವೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಈ ತಮ್ಮ ಉತ್ತರದಲ್ಲಿ ಹೊಸ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಹಂತಹಂತವಾಗಿ ಮಾಡುತ್ತೇವೆಂದು ಹೇಳಿದ್ದೀರಿ. ತಾವು ತೆಗೆದುಕೊಂಡಿರುವ ತಾಲೂಕ್ ಅಭಿವೃದ್ಧಿ ಮಂಡಳಿ ಆರೋಗ್ಯ ಕೇಂದ್ರಗಳು ರಿಪೇರಿ ಇಲ್ಲದೆ ಬೀಳುವ ಸ್ಥಿತಿಯಲ್ಲಿದೆ. ಅದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ತಿಳಿಸುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮ್ಮದ್.—೫ ವರ್ಷಗಳ ಕಾಲ ಅವರೇ ಮೇನ್‌ಟೈನ್ ಮಾಡುತ್ತೇವೆಂದು ಹೇಳಿದ್ದರೂ, ೨೫ ಪರ್ಸೆಂಟ್ ಬಿಲ್ಡಿಂಗ್ ಮೈನ್‌ಟೆನೆನ್ಸ್ ಎಂದು ತೆಗೆದುಕೊಳ್ಳುತ್ತಿದ್ದಾರೆ.

SRI R. PRABHAKAR TELKAR.—Which are the hospitals that have been taken over by the Government in Chitapur taluk ?

SRI A. K. ABDUL SAMAD.—I do not have that information right now. We have taken over 600 institutions all over the State.

SRI R. PRABHAKAR TELKAR.—In Arankar, Chitapur taluk, there is no building for the dispensary and it is functioning in the Panchayat's office. Will the Government think of constructing a new building or making some other alternative arrangement ?

SRI A. K. ABDUL SAMAD.—There are 600 institutions taken over from the Taluk Boards and Municipalities all over the State and most of these institutions are in a bad shape. The terms under which we have taken over them are that whatever amount the Taluk Boards or Municipalities used to spend for five years in respect of these dispensaries that amount should be given to us and out of that amount we will take up construction work.

SRI M. ABDUL LATHEEF.—Since the recently formed Public Health Units are running in small rooms, has the Government earmarked money for construction of the buildings for these units ?

SRI A. K. ABDUL SAMAD.—We have taken four acres of land, the local contribution of Rs. 25,000 will be accepted and the Government gives the designs etc. If the local bodies are willing to take up the work, we will permit them to start construction.

ಶ್ರೀಮತಿ ಅನುಸೂಯ ಗಜಾನನ ಶರ್ಮ —ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ಕೂಡ ಈ ಟಿ.ಡಿ.ಬಿ. ಆಸ್ಪತ್ರೆಗಳು ಇವೆ. ಆದರೆ ಈ ಆಸ್ಪತ್ರೆಗಳನ್ನು ಸರಿಯಾದ ರೀತಿಯಲ್ಲಿ ನಡೆಸಲು ಟಿ.ಡಿ.ಬಿ. ಯವರಲ್ಲಿ ಹಣವಿರುವುದಿಲ್ಲ. ಆದ್ದರಿಂದ ಅದನ್ನೆಲ್ಲಾ ಸರ್ಕಾರದವರು ವಹಿಸಿಕೊಂಡು ನಡೆಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಅದು ಸರ್ಕಾರದ ಪಾಲಿಸಿ ಡಿಸಿಷನ್ ಇದೆ. That is the Policy decision which we have to take up.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ನಾವು ತಿಳಿದುಕೊಂಡಿರುವ ಮಟ್ಟಿಗೆ ಎಲ್ಲಾ ತಾಲ್ಲೂಕು ಮಟ್ಟಗಳಲ್ಲಿ ಇರುವ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಿ ಅವಕ್ಕೆ ಜನರಲ್ ಆಸ್ಪತ್ರೆಗಳಿಗೆ ಕೊಡತಕ್ಕಂಥ

ಸವಲತ್ತುಗಳನ್ನು ಕೊಡಬೇಕೆಂದು ಒಂದು ಸರ್ಕಾರದ ಪಾಲಿಸಿ ಇದೆ ಎಂದು ನಾವು ತಿಳಿದುಕೊಂಡಿದ್ದೇವೆ. ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಈವತ್ತಿಗೂ ಕೂಡ ಒಂದು ಆಸ್ಪತ್ರೆಯನ್ನೂ ಅಪ್‌ಗ್ರೇಡ್ ಮಾಡಿಲ್ಲ. ಯಾವುದೇ ಜನರಲ್ ಆಸ್ಪತ್ರೆಗೆ ಕೊಡತಕ್ಕಂಥ ಸೌಲಭ್ಯವನ್ನು ಕೊಟ್ಟಿಲ್ಲ; ಇದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು. ಇದರ ಬಗ್ಗೆ ನಾವು ನಾಲ್ಕಾರು ಬಾರಿ ಮನವಿಗಳನ್ನು ಮಾಡಿಕೊಂಡಿದ್ದರೂ ಕಾರ್ಯರೂಪಕ್ಕೆ ಬಂದಿಲ್ಲ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

SRI A. K. ABDUL SAMAD.—In a phased way, we are taking up the upgradation of the taluk hospitals. ಹಿಂದಿನ ವರ್ಷ, ಈ ವರ್ಷ ಕೆಲವು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ಮೊನ್ನೆ ನನ್ನ ಡಿಮ್ಯಾಂಡ್ ಬುದಾಗ ನಾನು ಹೇಳಿದ್ದೇನೆ. ಪ್ರಿಯಾರಿಟಿ ಪ್ರಕಾರ ಅದನ್ನು ನಾವು ಮಾಡಿಕೊಂಡು ಹೋಗುತ್ತೇವೆ.

ಶ್ರೀ ಕೆ. ಬಿ. ಮಲ್ಲಪ್ಪ.—ನನ್ನ ಕ್ಷೇತ್ರದಲ್ಲಿ ಯಾವ ಆಸ್ಪತ್ರೆಯನ್ನೂ ಅಪ್‌ಗ್ರೇಡ್ ಮಾಡಿಲ್ಲ ಕೊನೆ ಪಕ್ಷ ನಮ್ಮ ಅರಕಲಗೂಡ್‌ನಲ್ಲಿರತಕ್ಕಂಥ ಆಸ್ಪತ್ರೆಯನ್ನಾದರೂ ಅಪ್‌ಗ್ರೇಡ್ ಮಾಡುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಅದನ್ನು ಮಾಡಿಕೊಡುತ್ತೇನೆ.

ಶ್ರೀ ಎಸ್. ಪಿ. ಪಾಟೀಲ್.—ನಮ್ಮ ಕ್ಷೇತ್ರದ ಕುರಾಳ್‌ನಲ್ಲಿ ಆಸ್ಪತ್ರೆಗೆ ಕಟ್ಟಡವಿಲ್ಲ. ಆಸ್ಪತ್ರೆಗೆ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ತೆಗೆದುಕೊಳ್ಳುತ್ತೀರಾ ? ಕುರಾಳ್‌ನಲ್ಲಿ ಆಸ್ಪತ್ರೆಯು ಗ್ರಾಮಸೇವಕರ ಕ್ವಾರ್ಟರ್ಸ್‌ನಲ್ಲಿ ನಡೆಯುತ್ತಿದೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಎಲ್ಲ ಮೂನಿಸಿಪಾಲಿಟಿಗಳಲ್ಲಿಯೂ ಇದೇ ಪ್ರಾಬ್ಲಮ್ ಇದೆ. ನಾನು ಫೈನಾನ್ಸ್ ಮಿನಿಸ್ಟರ್ ಜೊತೆಯಲ್ಲಿ ಮಾತನಾಡುತ್ತೇನೆ. ಈ ಬಗ್ಗೆ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಾಗಿದೆ ಎಂದು ಅವರಿಗೆ ತಿಳಿಸುತ್ತೇನೆ.

Maintenance of P.W.D. Roads in Bijapur Taluk

1095 SRI B. B. PATIL (Tikota)—Will the Minister for Public Works be pleased to state.—

(*a*) the total No. of PWD roads in Bijapur taluk of Bijapur District ;

(*b*) the number of all weather roads and roads yet to be repaired and maintained ;

(*c*) the total amount spent so far, year-wise for the last 5 years;

(*d*) whether the Government propose to take up these roads and entrust them to PWD to make them all weather roads under famine relief works ;

(*e*) if so when ;

(*f*) if not, the reason therefor ;

SRI KAGODU THIMMAPPA (Minister for Public Works).—

(*a*) The total number of PWD roads in Bijapur Taluka is 69 (sixty nine).

(*b*) The No. of roads is as under;

1)	All weather roads	...	41
2)	Yet to be improved	...	28